Sri ALUR HANUMANTHAPPA.—Now, the preliminary investigation is done. The Plan and estimates would be ready within a short time and we are going to receive the same.

Sri C. S. HULKOTI.—May I know the norms or ceiling under examination for these schemes ?

Sri ALUR HANUMANTHAPPA.—At present, the Government of India have fixed certain conditions about the cost per acre and the maintenance per acre.

Sri P. VENKATAGIRIAPPA.—May I know whether the lift irrigation is limitted to Dharwar districts or whether it is extended to other districts also.

Sri ALUR HANUMANTHAPPA.—We have extended the scheme to most of the districts also.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರ ಸರಕಾರದವರು ಸೀಲಿಂಗ್ ಲಿಮಿಟ್ ಹಾಕಿದ್ದಾರೆ ಎಂದು ಹೇಳಿದಿರಿ. ಸೀಲಿಂಗ್ ಲಿಮಿಟ್ ಗಣನೆಗೆ ತೆಗೆದುಕೊಳ್ಳದೆ 80 ಅಡಿ ಎತ್ತರದವರೆಗೆ ಇರತಕ್ಕ ಸ್ಕೀಮ್ಸ್ ತೆಗೆದುಕೊಳ್ಳಲಾಗಿದೆ ಎಂದು ಗೊತ್ತಾಗಿದೆ. ಇದನ್ನು ಸರಿಯಾಗಿ ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಕೇಂದ್ರ ಸರಕಾರದ 30 ಯೋಜನೆಗಳಲ್ಲದೆ ಇತ್ತೀಚೆಗೆ 62 ಯೋಜನೆಗಳನ್ನು ಸರಕಾರ ತೆಗೆದುಕೊಳ್ಳುವಾಗ್ಗೆ ಸ್ವಲ್ಪ ಮಟ್ಟಿಗೆ ಅಲ್ಲಿಯ ಪರಸ್ಥಿತಿ ಹೆಚ್ಚು ಗಣನೆಗೆ ತೆಗೆದುಕೊಂಡು ಮಾಡಿದೆ. ಇತ್ತೀಚೆಗೆ ಸೀಲಿಂಗ್ ಕೂಡ ಹೆಚ್ಚು ಮಾಡ ಬೇಕು ಎಂಬ ದೃಷ್ಟಿಯಿಂದ ವಿಷಯ ಪರಿಶೀಲನೆ ಮಾಡಲಾಗುತ್ತಿದೆ.

Sri C. S. HULKOTI.—As these are scarcity areas, even if the ceiling exceeds the limit, will funds be provided for these schemes ?

Sri ALUR HANUMANTHAPPA.—That is why Government is going to take this lift irrigation scheme even beyond the ceiling limit prescribed by the Government of India.

Lift Irrigation Schemes in Holenarasipur Taluk.

*Q.—76. **Sri H. D. DEVE GOWDA** (Holenarasipur).—

Will the Minister for Public Works be pleased to state :—

(*a*) for how many Lift Irrigation Schemes estimates were prepared by the Pubilc Works Department in Holenarasipur Taluk ;

(*b*) the names of the schemes and their cost ;

(*c*) the height (head) of each scheme ;

(*d*) the working cost per acre in each scheme ;

(*e*) the maintenance cost per acre in each scheme ?

*A.—**Sri ALUR HANUMANTHAPPA** (Deputy Minister for Minor Irrigation).—

(*a*) 11.

(*b*) to (*e*) *Vide* Statement appended.

STATEMENT

List of Irrigation Schemes prepared in Holenarasipur Taluk.

Sl. No.	Name of Scheme	Estimated Cost.	Total ht. Head in ft.	Cost per acre.	Cost per acre of maintenance per crop.
		Rs.		Rs.	Rs.
1	Lift Irrigation scheme near Gunda.	1,00,000	84.00	357	44.40
2	Lift Irrigation scheme near Kamasamudra.	65,000	68.00	325	48.88
3	Lift Irrigation scheme near Idigana Hosur.	78,000	90.00	230	49.00
4	Lift Irrigation scheme near Kadavinabachalli.	1,21,000	87.43	542	48.00
5	Lift Irrigation scheme near Nagarathi.	1,58,000	93.25	594	49.00
6	Lift Irrigation scheme near Chikkanahalli.	68,000	84.83	309	28.50
7	Lift Irrigation scheme near Unnenahalli.	82,000	89.64	410	36.24
8	Lift Irrigation scheme near Paduvalahippe.	1,27,000	77.40	562	50.88
9	Lift Irrigation scheme near Valumbige.	1,22,000	66.16	370	30.03
10	Lift Irrigation scheme near Hanumanahalli.	85,000	99.54	507	66.67
11	Lift Irrigation scheme near Mulekalanahalli.	76,000	87.18	345	40.91

ಶ್ರೀ ಎಚ್. ಡಿ. ದೇವೇಗೌಡ.—ಹೊಳೆನರಸೀಪುರ ತಾಲ್ಲೂಕಿನಲ್ಲಿ 11 ಲಿಫ್ಟ್ ಇರಿಗೇಷನ್ ಸ್ಕೀಮ್ಸ್ ತಯಾರಾಗಿದೆ ಮತ್ತು ಅದಕ್ಕೆ 10 ಲಕ್ಷ ರೂಪಾಯಿ ಅಂದಾಜು ಮಾಡಿದೆ ಎಂದು ಉತ್ತರದಲ್ಲಿ ಹೇಳಿದೆ. ಅದರೆ 1963ನೇ ಇಸವಿಯಲ್ಲಿ ಇದೇ ಸಭೆಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಟ್ಟ ಕಾಲದಲ್ಲಿ ಈ ಲಿಫ್ಟ್ ನೀರಾವರಿ ಯೋಜನೆ ಮಂಜೂರು ಮಾಡುತ್ತೇನೆ ಎಂದು ಭರವಸೆ ಕೊಟ್ಟಿದ್ದೀರಿ. 1963ರಿಂದ 1966ರ ವರೆಗೆ ಮಂಜೂರು ಮಾಡುತ್ತೇವೆಂದು ಹೇಳಿದ ಭರವಸೆ ಏತಕ್ಕೆ ಈಡೇರಿಸಲಿಲ್ಲ ?

† ಶ್ರೀ ಆಲೂರು ಹನುಮಂತಪ್ಪ.—ಕೆಲವು ಕಡೆ ಈ ಯೋಜನೆಯ ಎಸ್ಟಿಮೇಟ್ಸ್ ತಯಾರಾಗಿರಲಿಲ್ಲ. ಈ ಮಾನ್ಯ ಸಭೆಯಲ್ಲಿ ಈಡೀ ದೇಶದ ಅಂದರೆ, 19 ಜಿಲ್ಲೆಗಳಲ್ಲಿ ಸಿದ್ಧವಾಗಿರತಕ್ಕಂಥ 287 ಯೋಜನೆಗಳ ಒಂದು ಪಟ್ಟಿಯನ್ನು ಒದಗಿಸಿದ್ದೇವೆ. ಕ್ಯಾಬಿನೆಟ್ ಉಪಸಮಿತಿಯು ಅದನ್ನು ಪರಿಶೀಲನೆ ಮಾಡಿ, ಎಲ್ಲ ಜಿಲ್ಲೆಗಳಲ್ಲಿ ಇದಕ್ಕೆ ಪ್ರಾತಿನಿಧ್ಯ ಕೊಡಬೇಕು, ಕ್ಷಾಮ ಪರಿಸ್ಥಿತಿಯ ಬಗ್ಗೆ ಗಮನ ಕೊಡಬೇಕು ಎಂದು ಹಾಗಿ ಇರುವುದರಿಂದ ಇವನ್ನು ಯೋಜನೆ ಮಾಡಬೇಕಾಗುತ್ತದೆ.

ಶ್ರೀ ಅಂದಾನಯ್ಯ.—ಕೇಂದ್ರ ಸರಕಾರದವರು 30 ಸ್ಕೀಮ್ಸ್ ಅಪ್ರೂವ್ ಮಾಡಿದ್ದಾರೆ. ಅಪ್ರೂವ್ ಮಾಡಿದ ಈ ಲಿಫ್ಟ್ ಇರಿಗೇಶನ್ ಸ್ಕೀಮ್ಸ್ ಹಳೇ ಮೈಸೂರಿನಲ್ಲಿ ಎಷ್ಟು ಇವೆ, ಹೊಸ ಮೈಸೂರು ಅಂದರೆ, ಬಾಕಿ ಭಾಗದಲ್ಲಿ ಎಷ್ಟು ಇವೆ ?

ಶ್ರೀ ಆಲೂರು ಹನುಮಂತಪ್ಪ.—ಕೇಂದ್ರ ಸರಕಾರದ 81 ಯೋಜನೆಗಳ ಪಟ್ಟಿಯಲ್ಲಿ ಪರಿಮಿತಿಯೊಳಗೆ ಇರುವುದನ್ನು ಮಾತ್ರ ತೆಗೆದುಕೊಂಡಿದೆ. ಅದರೆ ರಾಜ್ಯ ಸರಕಾರದವರು ಮಾರ್ಚ್ ತಿಂಗಳಿನಲ್ಲಿ ದೇಶದ ಪರಿಸ್ಥಿತಿ ಗಣನೆಗೆ ತೆಗೆದುಕೊಂಡು, ಪರಿಮಿತಿ ಸ್ವಲ್ಪಮಟ್ಟಿಗೆ ಬಿಟ್ಟು, ಕೆಲವು ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಸೀಲಿಂಗ್ ಫಿಕ್ಸ್ ಮಾಡಿರುವುದನ್ನು ಮೀರಿ ಮುಂದೆ ಹೋಗಿದ್ದೇವೆ. ಇನ್ನೂ ಹೆಚ್ಚು ಕೆಲಸ ಕೈಕೊಳ್ಳಲು ಸಾಧ್ಯವಿದೆಯೋ ಎಂಬುದಕ್ಕೆ ಪರಿಶೀಲನೆ ನಡೆಯುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—1963ನೇ ಇಸವಿಯಲ್ಲಿ ಪ್ರಶ್ನೆ ಕೇಳಿದಾಗ್ಗೆ ಅಂದಾಜು ಮಂಜೂರು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಕೇಂದ್ರ ಸರಕಾರ ಅಪ್ರೂವ್ ಮಾಡಿದ 31 ಲಿಫ್ಟ್ ಇರಿಗೇಷನ್ ಸ್ಕೀಮ್ಸ್ ಬಗ್ಗೆ ಯಾವ ಮಿತಿ ಇಟ್ಟಿದ್ದೀರಿ ? ಈ ಸಭೆಯಲ್ಲಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಎಲ್ಲ ಇದೆ ಅಲಿಮಿಟ್ಸ್ ?

(ಉತ್ತರ ಇಲ್ಲ)

ಶ್ರೀ ಎಸ್. ಶಿವಪ್ಪ.—ಹಾಸನ ಜಿಲ್ಲೆಯಲ್ಲಿ ಹೇಮಾವತಿ ನದಿಯ ದಂಡೆಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಮಂಜೂರು ಮಾಡಬೇಕೆಂದು ಮೂರು ವರ್ಷಗಳ ಕೆಳಗೆ ಅಂದಾಜುಗಳು ತಯಾರಾಗಿದ್ದರೂ ಕೂಡ ಅವುಗಳನ್ನು ಮಂಜೂರು ಮಾಡದೆ ಇರುವುದಕ್ಕೆ ಪ್ರಬಲವಾದ ಕಾರಣಗಳೇನು ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಕೆರೆಗಳಿರುವ ಕಡೆ ಕೆರೆಗಳಿಗೆ ಅದ್ಯತೆಯನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ ಅಂಥ ಕಡೆಗಳಲ್ಲಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡಿದ್ದು ಉಂಟು. ಅದರೆ ಇತ್ತೀಚೆಗೆ ಹಾಕಿಕೊಂಡಿರುವ ಕಾರ್ಯಕ್ರಮದ ಪ್ರಕಾರ ಲಿಫ್ಟ್ ಇರಿಗೇಷನ್ ಕಾರ್ಯಗತವಾಗಬೇಕು ಎನ್ನುವ ದೃಷ್ಟಿಯಿಂದ ಅಂದಾಜುಗಳನ್ನು ತಯಾರು ಮಾಡರಾಗಿದೆ ಮತ್ತು ಅವನ್ನು ಆದಷ್ಟು ಬೇಗ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಕೇಂದ್ರ ಸರ್ಕಾರದವರು ಕೆಲವು ಪರಿಮಿತಿಗಳನ್ನು ಹಾಕಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಈ ಪರಿಮಿತಿಗಿಂತ, ಅಂದರೆ ಒಂದು ಎಕರೆಗೆ ಬೀಳುವ ಖರ್ಚು ಇವೆಲ್ಲ ಎರಡರಷ್ಟು ಹೆಚ್ಚಾದರೂ ನಮ್ಮ ಮೈಸೂರು ರಾಜ್ಯದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳು feasible ಆಗುತ್ತವೆ, ವರ್ಕ್ ಔಟ್ ಆಗುತ್ತವೆ, ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಅಭಿಪ್ರಾಯ ಸರ್ಕಾರಕ್ಕೆ ಗೊತ್ತಿದೆ. ನೀರಾವರಿಗೆ ಒಳಪಡತಕ್ಕ ಜಮೀನುಗಳಲ್ಲಿ ಎಷ್ಟೋ ಮೇಂಟೆನೆನ್ಸ್ ಕಾಸ್ಟ್ ಅದರೂ ರೈತರು ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ಎಷ್ಟು ಖರ್ಚು ತಗಲಿದರೂ ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ಎನ್ನುವುದು ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮೊದಲನೆಯ ಕಂತಾಗಿ ಮಂಜೂರಾದ 31 ಯೋಜನೆಗಳಲ್ಲಿ ಇವು ಸೇರಿಲ್ಲ, ಎರಡನೆಯದಾಗಿ, ರಾಜ್ಯ ಸರ್ಕಾರದವರು ಒಪ್ಪಿಗೆ ಕೊಟ್ಟಿರುವ 61 ಲಿಫ್ಟ್ ಇರಿಗೇಷನ್ ಸ್ಕೀಮುಗಳಲ್ಲಿಯೂ ಹೊಳೆನರಸೀಪುರ ತಾಲ್ಲೂಕಿಗೆ ಸಂಬಂಧಪಟ್ಟ 11 ಯೋಜನೆಗಳು ಸೇರಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಅಲೂರು ಹನುಮಂತಪ್ಪ.—ಆಗ ಅಂದಾಜುಗಳು ಸಿದ್ಧವಾಗಿರಲಿಲ್ಲ; ಈಗ ಸಿದ್ಧವಾಗಿವೆ. ಅವನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಸ್ಪಷ್ಟವಾದ ಪ್ರಶ್ನೆ ಹಾಕಲ್ಪಟ್ಟ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಿಲ್ಲ. ಕೇಂದ್ರ ಸರ್ಕಾರದವರು ಮಂಜೂರು ಮಾಡಿರತಕ್ಕ 31 ಯೋಜನೆಗಳಲ್ಲಿ ಹಳೆಯ ಮೈಸೂರು ಭಾಗದವು ಎಷ್ಟು, ಹೊಸ ಮೈಸೂರು ಭಾಗದವು ಎಷ್ಟು ಎನ್ನುವುದಕ್ಕೆ ಸ್ಪಷ್ಟ ಉತ್ತರವನ್ನು ದಯಪಾಲಿಸುವ ಧೈರ್ಯವನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದವರು ಮಂಜೂರು ಮಾಡಿರುವ 31 ಲಿಫ್ಟ್ ಇರಿಗೇಷನ್ ಯೋಜನೆಗಳು ಯಾವುವು ಎನ್ನುವುದು ಎಲ್ಲರಿಗೂ ಗೊತ್ತಿದೆ ಎಂದು ನನಗನ್ನಿಸುತ್ತದೆ. ಈ ವಿವರಗಳನ್ನು ಮುಚ್ಚಿಡಬೇಕು ಎನ್ನುವ ವಿಚಾರ ಸರ್ಕಾರಕ್ಕೆ ಇಲ್ಲ. ಬೇಕಾದರೆ ನಾಳೆ ಆ ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ಇನ್ನೊಂದು ವಿಚಾರ. ಇದರಲ್ಲಿ ಇರುವಂಥಾದ್ದು ಎಂದರೆ, ಅನೇಕ ಮಾನ್ಯ ಸದಸ್ಯರು ಪ್ರಶ್ನೆ ಹಾಕಿದಾಗ 31 ಕೆಲಸ ಕಾರ್ಯಗಳನ್ನು ನಮ್ಮ ಸರ್ಕಾರದವರು ಏನೋ ಪ್ರಯತ್ನ ಮಾಡಿ ಮಂಜೂರು ಮಾಡಿಕೊಂಡಿದ್ದಾರೆ ಎನ್ನುವ ಧಾಟಿಯಲ್ಲಿ ಹೇಳುತ್ತಿದ್ದಾರೆ. ಸುಮಾರು 81 ಲಿಫ್ಟ್ ಇರಿಗೇಷನ್ ಸ್ಕೀಮುಗಳಿಗೆ ಅಂದಾಜನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಅದರಲ್ಲಿ 31 ಯೋಜನೆಗಳನ್ನು ಅವರು ಮಂಜೂರು ಮಾಡಿ, ಕಳಿಸಿದ ಮೇಲೆಯೇ ನಮಗೆ ಆ ವಿಚಾರ ಗೊತ್ತಾದದ್ದು ಇಂಥವನ್ನು ಮಂಜೂರು ಮಾಡಿ, ಇಂಥವನ್ನು ಮಂಜೂರು ಮಾಡಬೇಡಿ ಎನ್ನುವ ಯಾವ ತರಹ ಸಿಫಾರಸನ್ನೂ ಕೇಂದ್ರ ಸರ್ಕಾರಕ್ಕೆ ನಾವು ಕಳಿಸಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಲಿಫ್ಟ್ ಇರಿಗೇಷನ್ ಸಲುವಾಗಿ ಕೇಂದ್ರ ಸರ್ಕಾರ ಹಣವನ್ನು ಕೊಡುತ್ತದೆ ಎಂದು ಮಂತ್ರಿಗಳು ಹೇಳಿದರು. ಬಿಜಾಪುರ ಜಿಲ್ಲೆ ಬರಗಾಲ ಪೀಡಿತ ಜಿಲ್ಲೆ. 31 ಯೋಜನೆಗಳಲ್ಲಿ ಬಾಗೇವಾಡಿ ತಾಲ್ಲೂಕಿಗೆ ಸೇರಿದ ಹಾಗೆ ಏನಾದರೂ ಯೋಜನೆಗಳು ಬಂದಿವೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಂಜೂರಾಗಿರುವ 31 ಯೋಜನೆಗಳ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಸರ್ಕ್ಯುಲೇಟ್ ಮಾಡುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಸದಸ್ಯರು ಸ್ಪಷ್ಟವಾಗಿ ಇಲ್ಲಿ ಹೇಳಿರತಕ್ಕ ಯೋಜನೆಗಳನ್ನು ಏಕೆ ಕೈ ಬಿಟ್ಟಿರಿ ಎಂದು ಕೇಳಿದ್ದಾರೆ. ಸರ್ಕಾರದವರು ಅಂದಾಜುಗಳು ತಯಾರಾಗಿರಲಿಲ್ಲವಾದ್ದರಿಂದ ಕೈ ಬಿಟ್ಟಿದ್ದೇವೆ ಎಂದು ಹೇಳಿದರು. ಕೇಂದ್ರ ಸರ್ಕಾರದವರು ಈಚೆಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 40 ಕೋಟಿ ರೂಪಾಯಿಗಳನ್ನು ಸಣ್ಣ ನೀರಾವರಿ ಯೋಜನೆಗಳಿಗೆ ರಾಜ್ಯಕ್ಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಹಣವನ್ನು ಸ್ಕೀಮ್‌ವೈಸ್ ಕೊಡುತ್ತಾರೆಯೇ ಅಥವಾ ಒಟ್ಟಾಗಿ (lumpsum) ಕೊಡುವುದನ್ನು ನಮ್ಮ ಸರ್ಕಾರದವರು ಹಂಚುತ್ತಾರೆಯೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಯೋಜನೆಯಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಎಂದು ಪ್ರಾವಿಷನ್ ಮಾಡುತ್ತೇವೆ. ಹಾಗೆ ಮಾಡಿದ ಮೇಲೆ ಆ ಕೆಲಸಗಳನ್ನು ನಾವೇ ಮಂಜೂರು ಮಾಡುತ್ತೇವೆ, ಹಣವನ್ನು ನಾವೇ ಖರ್ಚುಮಾಡುತ್ತೇವೆ. ಹೋದ ಸಲ ಲಿಫ್ಟ್ ಇರಿಗೇಷನ್ ಕ್ರಾಷ್ ಪ್ರೋಗ್ರಾಂನಲ್ಲಿ ಹಣ ಕೊಡಲು ಕೇಂದ್ರ ಸರ್ಕಾರದವರು ಒಪ್ಪಿ ಯೋಜನೆಗಳನ್ನು ಅವರೇ ಮಂಜೂರು ಮಾಡಿದರು.

Mr. SPEAKER.—This is crash programme which is outside the plan.

Sri C. J. MUCKANNAPPA.—Sir, last July the Hon'ble Chief Minister was pleased to state that lift irrigation schemes for each constituency and each district would be sanctioned and that technical difficulties would be over. Now the Hon'ble P.W. Minister says that they are sent to the Government of India for sanction. The Hon'ble Deputy Minister speaking of the Master Plan said, once that he has included all schemes in the master plan and all of them will be sanctioned by the State Government. We are going to get about 38 crores. I want to know whether the statement of the Chief Minister is correct or whether the contradictory statement made by the P.W. Minister and the Deputy Minister is correct.

ಶ್ರೀ ವೀರೇಂದ್ರ ಪಾಟೀಲ್.—ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟನ್ನು ನಾವು ಮಾಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಸದಸ್ಯರಿಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಪರಿಶೀಲನೆ ಮಾಡಬೇಕಾಗುತ್ತದೆ. ಲಿಫ್ಟ್ ಇರಿಗೇಷನ್ ಸ್ಕೀಮನ್ನು ಮಂಜೂರು ಮಾಡುತ್ತೇವೆ ಎಂದು ಅವರು ಹೇಳಿರಲಾರರು ಎಂದು ನನಗನ್ನಿಸುತ್ತದೆ. ಲಿಫ್ಟ್ ಇರಿಗೇಷನ್ ಫ್ಲೋ ಇರಿಗೇಷನ್‌ಗಿಂತಲೂ ಹೆಚ್ಚು ಖರ್ಚು ಬೀಳುವಂಥದ್ದು. ಬಹುಶಃ ಫ್ಲೋ ಇರಿಗೇಷನ್‌ಗೆ 15 ರೂಪಾಯಿ ಖರ್ಚಾದರೆ ಲಿಫ್ಟ್ ಇರಿಗೇಷನ್ನಿಗೆ 60—70 ರೂಪಾಯಿ ಆಗುತ್ತದೆ. ಈ ಹೆಚ್ಚು ಖರ್ಚನ್ನು ರೈತರು ಕೊಡುವುದಕ್ಕೆ ತಯಾರಾಗಬೇಕಾಗುತ್ತದೆ. ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಯಾರು ಮೇಂಟೇನ್ ಮಾಡಬೇಕು ಎನ್ನುವ ವಿಚಾರಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಅದಕ್ಕಾಗಿ ಹೋದ ಸಲ ಹೊಳೆನರಸೀಪುರದ ಮಾನ್ಯ ಸದಸ್ಯರು 11 ಯೋಜನೆಗಳನ್ನು ಏಕೆ ತೆಗೆದುಕೊಳ್ಳಲಿಲ್ಲ ಎಂದು ಕೇಳಿದಾಗ ನಾವು ಅಲ್ಲಿಗೆ ಹೋಗಿ ಜನರನ್ನು ಕೇಳಿದ್ದೇವೆ, ಮಾನ್ಯ ಸದಸ್ಯರನ್ನೂ ಕೇಳಿದ್ದೇವೆ. ಎಲ್ಲ ಫ್ಲೋ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆಗಳಲ್ಲಿ ಮಾತ್ರ ಲಿಫ್ಟ್ ಇರಿಗೇಷನ್ ಕೊಡುವುದು, ಫ್ಲೋ ಇರಿಗೇಷನ್ ಇರುವ ಕಡೆ ಲಿಫ್ಟ್ ಇರಿಗೇಷನ್ ಕೊಡುವುದಿಲ್ಲ. ನಾನು ಮತ್ತು ಹಣಕಾಸಿನ ಸಚಿವರು ಆ ಭಾಗಕ್ಕೆ ಹೋಗಿ ಬಂದ ಮೇಲೆ 27—28 ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳನ್ನು ಹಾಸನ ಜಿಲ್ಲೆಯಲ್ಲಿ ಮಾಡಿದ್ದೇವೆ. ಅದರಲ್ಲಿಯೂ ಮಾನ್ಯ ಎಮರು ಪಕ್ಷದ ನಾಯಕರ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ.

Sri K. LAKKAPPA.—Is it not the intention of the Government that lift irrigation should be taken more in number in famine belts like Kolar, Tumkur and Chitradurga ?

Sri VEERENDRA PATIL.—Wherever it is possible, wherever it is feasible they will be taken up.

Feeder channel to Kanva Reservoir.

*Q.—17. Sri B. J. LINGE GOWDA (Channapatna).—

Will the Minister for Public Works be pleased to state :—

what action has been taken for providing a feeder channel to Kanva Reservoir from the proposed Manchanabele Project ?

A.—Sri VEERENDRA PATIL (Minister for Public Works).—

An estimate amounting to Rs. 316.78 lakhs is now prepared for construction of Manchanabele Reservoir Project as a flood-*cum*-irrigation project. A sum of Rs. 49.87 lakhs is provided in this estimate towards the feeder channel from Manchanabele to Kanava Reservoir.

ಶ್ರೀ ಬಿ. ಜೆ. ಲಿಂಗೇಗೌಡ.—ಕೇಂದ್ರ ನೀರಾವರಿ ಸಚಿವರಾದ ಕೆ. ಎಲ್. ರಾವ್ ಅವರು ಇತ್ತೀಚೆಗೆ ಮೈಸೂರು ರಾಜ್ಯಕ್ಕೆ ಭೇಟಿ ಕೊಟ್ಟಾಗ ಮಂಚನಬೆಲೆ ಜಲಾಶಯದ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟ ಕೂಡಲೇ ಪ್ರವಾಹ ನಿಯಂತ್ರಣ ನಿಧಿಯಿಂದ ಹಣವನ್ನು ಆ ಯೋಜನೆಗೆ ಒದಗಿಸಿಕೊಡುವುದಾಗಿ ಭರವಸೆಯನ್ನು ಕೊಟ್ಟಿದ್ದುದ್ದು ಸರ್ಕಾರದ ಗಮನದಲ್ಲಿಯೇ ? ಈ ದಿಸೆಯಲ್ಲಿ ಏನು ಕಾರ್ಯಕ್ರಮವನ್ನು ಸರ್ಕಾರದವರು ಕೈಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಪ್ರವಾಹ ನಿಯಂತ್ರಣ ನಿಧಿಯಿಂದ ಹಣವನ್ನು ಈ ಯೋಜನೆಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಕೇಂದ್ರ ನೀರಾವರಿ ಮಂತ್ರಿಯವರು ಹೇಳಿದ್ದಾರೆ. ಅವರು ಹೇಳಿದ ಪ್ರಕಾರ ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರಿಸಿ 16ನೇ ಸೆಪ್ಟೆಂಬರ್ 1966ರಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.